ಒಂದಾಣೆ ಮಾಲೆ 266

ರಣಮಲ್ಲ ವಿಜಯ

(ಐತಿಹಾಸಿಕ ಏಕಾಂಕ ನಾಟಕ)

❊

ರಚಯಿತ:
ಶ್ರೀ। ಜಿ. ಕೆ. ಆಚಾರ್ಯ, ಚಿತ್ರಾಪುರ.

❊

1960

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ರಣಮಲ್ಲ ವಿಜಯ

(ಐತಿಹಾಸಿಕ ಏಕಾಂಕ ನಾಟಕ)

ಪಾತ್ರವರ್ಗ:— ರಾಯಸಿಂಹ. ಮಯೂರಧ್ವಜ. ಮಂತ್ರಿ. ಜಗಮಲ್ಲ. ರಣಮಲ್ಲ. ವಿಲಾಸಸಿಂಹ. ಎಚ್ಚಣ್ಣ. ಶೀಲಾವತಿ. ದೂತ. ವನಪಾಲಕ.

ದೃಶ್ಯ ೧

(ಅರಮನೆ. ರಾಯಸಿಂಹ ರಾಜನೂ, ಮಯೂರಧ್ವಜನೂ, ಮಂತ್ರಿಯೂ ಸಭೆಯಲ್ಲಿ ಮಂಡಿಸಿರುತ್ತಾರೆ. ನರ್ತಕಿಯು ರಂಗಪೂಜಾ ನೃತ್ಯವಾಡುವಳು.)

ರಾಯಸಿಂಹ: (ನರ್ತನ ಮುಗಿಯುತ್ತಲೇ) ಶಹಭಾಸ್! ಶಹಭಾಸ್! ಭಲೆ! ತಾಳಲಯಬದ್ಧವಾದ ನೃತ್ಯ! ಕಲಾನೈಪುಣ್ಯತೆಯನ್ನು ಹೊಂದಿದ ಚತುರೆ ನರ್ತಕಿ! ಇದೋ! (ಉಪಹಾರವಾಗಿ ಒಂದು ಸರವನ್ನು ಕೊಡುವನು; ನರ್ತಕಿಯು ತಲೆಬಾಗಿ, ಹೊರಟುಹೋಗುವಳು.) ಚತುರೋಕ್ತಿಯಿಂದ ನಗಪುರವನ್ನು ಪಾಲಿಸುವ ಅಧಿಕಾರ ನನ್ನದು. ವೀರ ಭವಾನಿ ದೇವಿಯ ವರಪ್ರಸಾದದ ಮಹಿಮೆ, ಅಪಾರ ಮಂತ್ರಾಲೋಚನೆಯಿಂದ ಸೂಕ್ತ ಬಯಸುವ ಮಂತ್ರಿಶೇಖರನ ವಿಶ್ವಾಸ, ಅತುಳ ಯುಕ್ತಿಸಾಮರ್ಥ್ಯಗಳಿಂದ ವಿರೋಧಿಗಳನ್ನು ನಡುಗಿಸುವ ಸೇನಾನಾಯಕ ಮಯೂರಧ್ವಜನ ವಾತ್ಸಲ್ಯ, ಸಕಲಸಂಪತ್ತುಗಳು ನಮ್ಮಲ್ಲಿ ಧಾರಾಳವೆಂದ ಮೇಲೆ ದೈವಫಲವೇನು ಹಿಂದುಳಿಯುವುದೇ? ನಾನು ಬಯಸಿದ್ದ ರಜಪೂತ ಕನ್ಯೆ ಕಲ್ಯಾಣಿಯೆಂಬವಳು, ಆ ಜಗಮಲ್ಲನೆಂಬವನಲ್ಲಿ ಮನವಿರಿಸಿದ್ದವಳಂತೆ. ಆದರೆ, ಮಂತ್ರಿ, ಸೇನಾನಾಯಕರ ಸುಲಭೋಪಾಯದಿಂದ ಆ ಕನ್ಯೆಯನ್ನು ಬಲಾತ್ಕರಿಸಿ ಪಡೆದೆನು. ಮಂತ್ರಿಗಳೇ, ಇದೇನು ಆಳವಾದ ವಿಚಾರದಲ್ಲಿ ಮಗ್ನರಾಗಿರುವಿರಿ?

ಮಂತ್ರಿ: ಮಹಾಪ್ರಭೋ! ಹುಚ್ಚು ಮನಸ್ಸು ಮೈಮರೆತುಬಿಡುವುದು ಸ್ವಾಭಾವಿಕ. ಅಂತೆ ಪರಿಣಾಮವನ್ನು ಇದಿರಿಸುವುದು ಮಾತ್ರ ಕಷ್ಟ.

ರಾಯ: ಏನು ಮಹಾ ಪರಿಣಾಮ? ಹೇಳಬಾರದೆ?

ಮಂತ್ರಿ; ಮಹಾರಾಜ! ಕಲ್ಯಾಣಿದೇವಿಯರನ್ನು ಪಡೆದ ವಿಚಾರದಲ್ಲಿ ಸಾಮಾನ್ಯ ಯೋಚನೆ ಸಾಲದು. "ಹಾಲೆರೆದ ಹಾವಿನಂತೆ" ಒಮ್ಮೆಗಾದರೂ ಪ್ರತಿಕೂಲವಾಗದೆ ಉಳಿಯದು.

ರಾಯ: ಪಂಜರದಲ್ಲಿ ಕೂಡಿಸಿದ ಮೃಗದಿಂದ ಏನಾಗಬಹುದು ಮಂತ್ರೀ?

ಮಂತ್ರಿ: ಪಂಜರದ ಮೃಗಗಳು ಒಂದಾದರೆ ಎಂದಿಗೂ ಕೂಡಿದಂತಿರಲಾರದು, ಆ ಜಗಮಲ್ಲನಾರು? ಈ ನಮ್ಮ ಸೇನಾನಾಯಕರ ಸಹೋದರನಲ್ಲವೆ? ಒಂದು ಹಕ್ಕಿಯ ಎರಡು ಪಕ್ಕಗಳಂತಿದ್ದ ಇವರು ತಮ್ಮೊಳಗೇ ವಿರೋಧಿಗಳಾದಾರೇ? ಆಲೋಚನೆ ಚೆನ್ನಾಗಿರಲಿ ಪ್ರಭೋ!

ಮಯೂರಧ್ವಜ: (ಎದ್ದು ಆವೇಶದಿಂದ) ಮಂತ್ರಿಗಳೇ! ಏನು,ರಾಜರ ಮುಂದೆ ಅಲ್ಲಸಲ್ಲದ ಮಾತುಗಳಿಂದ ಮುಳ್ಳಿನಂತೆ ಚುಚ್ಚಿ ಗಳಹುತ್ತೀರಿ?

ಮಂತ್ರಿ: ನಾಯಕರೇ, ತಪ್ಪು ತಿಳಿದಿರಿ! ನಾನು ನಿಮಗೆ ಕೇಳಿಸದಂತೆ ಏಕಾಂತವಾಗಿ ಹೇಳಲಿಲ್ಲ. ಸಮಕ್ಷಮದಲ್ಲಿ ಕಂಡಂತೆ ಹೇಳಿದರೆ ಕೋಪಿಸಲಾಗದು!

ಮಯೂರ: ಇರಬಹುದು ನಿಮಗೆ ಅಧಿಕಾರವಾಣಿಯ ಹಕ್ಕು. ನಾನು ಅಚಲ ಶ್ರದ್ಧೆಯಿಂದ ನಡೆಸುವ ರಾಜಕಾರಣದಲ್ಲಿ ಗ್ರಹಿಸಿದ ಕಳಂಕವಾವುದು?

ಮಂತ್ರಿ: ಶತ್ರುಗಳನ್ನು ಅಲ್ಪವೆಂದು ತ್ಯಜಿಸಬಾರದಷ್ಟೆ? ಇತ್ತೀಚೆಗೆ ನಡೆದ ಕಲ್ಯಾಣಿದೇವಿಯರ ವೈವಾಹ ಘಟನೆಯಿಂದ ನಮ್ಮ ಮೇಲೆ ಧಾಳಿಯಿರಿಸಲು ಹಾತೊರೆಯುತ್ತಿರುವ ಜಗಮಲ್ಲನನ್ನು ಏಕೆ ಮುರಿಯಬಾರದು? ಸಹೋದರನೆಂಬ ಭಾವನೆಯಿಂದ ಸುಮ್ಮನಿರುವಿರಿ ಎಂದರೂ ತಪ್ಪಲ್ಲವಷ್ಟೆ?

ಮಯೂರ: ನನ್ನ ತಮ್ಮನಲ್ಲಿ ಅಷ್ಟು ವಿಶ್ವಾಸವಿರುತ್ತಿದ್ದರೆ, ಅಂದು ಕಲ್ಯಾಣಿದೇವಿಯರನ್ನು ಪಡೆಯಲು ರಾಜರ ಬಲಾತ್ಕಾರವನ್ನು ಎದುರಿಸುತ್ತಿರಲಿಲ್ಲವೆ? ಹೋಗಲಿ. ಅಪ್ಪಣೆಯಾದರೆ ಈಗಲೇ....(ಕತ್ತಿಯನ್ನೆತ್ತುವನು),

ರಾಯಸಿಂಹ: ಭಲೆ! ಭಲೆ! ವಿಜಯೀಭವ!

ಮಯೂರ: ನಾನು ಸಹೋದರಪ್ರೇಮಿಯೋ, ನಿಷ್ಕಳಂಕ ರಾಜಪ್ರೇಮಿಯೋ ಎಂಬುದನ್ನು ನಿಶ್ಚಯಿಸದೆ ಈ ಸಭೆಯನ್ನು ಪ್ರವೇಶಿಸು

ವಂತಿಲ್ಲ. ಇದು ಭೀಷ್ಮಪ್ರತಿಜ್ಞೆ! ಪ್ರಭೋ, ಹೊರಡಲು ಅಪ್ಪಣೆಯಾಗಲಿ! (ಹೋಗುವನು.)

ರಾಯ: ಮಂತ್ರಿಗಳೇ, ಬಹಳ ನಾಜೂಕಾಗಿ ಕಾರ್ಯವನ್ನು ಬಯಲಿಗಿಳಿಸಿದಿರಿ! ಜಗಮಲ್ಲನಂತೂ ತೀರಿದಂತೆ ನಿಶ್ಚಯ. ಆ ಮೇಲೆ, ಹ್ಹ! ಹ್ಹ! ಹ್ಹ!

(ತೆರೆ ಬೀಳುವುದು)

ದೃಶ್ಯ ೨

(ಕಾಡುಪ್ರದೇಶ. ಜಗಮಲ್ಲನು ಏಕಾಂತವಾಗಿ ಕುಳಿತು)

— ಜೈ ಭುವನೇಶ್ವರೀ ವೀರಮಾತೆ! ಕೇವಲ ಬೆರಳೆಣಿಕೆಗೆ ಮಾತ್ರ ರಜಪೂತ ವಂಶವು ನನ್ನೊರ್ವನಿಂದ ಉಳಿದಿದೆ. ಕ್ಷತ್ರಿಯರು ನಮ್ಮ ವಶವಾಗಿದ್ದ ರಾಜ್ಯದಧಿಕಾರವನ್ನು ಕಸಿದುಕೊಂಡರು. ಸಾಕಷ್ಟು ಶಕ್ತಿ ನಮ್ಮಲ್ಲಿಲ್ಲವಾದ ಕಾರಣ ಸೋಲೊಪ್ಪಿ ಕಾಡಿನಲ್ಲಿ ತಲೆಮರೆಸಿಕೊಳ್ಳಬೇಕಾಯಿತು. ಅದಕ್ಕೆ ಮರುಗುವಂತಿಲ್ಲ. ಮೊನ್ನೆ ಇತ್ತೀಚೆಗೆ ನಡೆದ ಘಟನೆಯಿಂದ ವೈರೋಮಾಂಚನವಾಗುವುದು. ಇರಲಿ. ಕಂದನೆಲ್ಲಿ ಆಡುತ್ತಿರುವನು? ಕಂದಾ! ರಣಮಲ್ಲು! ಮಗೂ! (ರಣಮಲ್ಲನು ಪ್ರವೇಶಿಸಿ ಜಗಮಲ್ಲನನ್ನು ಆಲಿಂಗಿಸುವನು.)

ರಣಮಲ್ಲ: ಅಪ್ಪಾ, ಕರೆದಿರಾ?

ಜಗ: ಅಹುದು ಕುಮಾರ. ನಿನ್ನನ್ನು ಬಿಟ್ಟು ನನ್ನ ಮನಸ್ಸು ಒಂದರೆಗಳಿಗೆಯೂ ಶಾಂತಿಹೊಂದುವಂತಿಲ್ಲ. ಎಲ್ಲಿಗೆ ಹೋಗಿದ್ದೆ?

ರಣ: ಎಲ್ಲಿಗೆ ಹೋಗಲಿ ಅಪ್ಪ? ಸಮನಾದ ವಯಸ್ಕರು ಇಲ್ಲಿಲ್ಲ. ಕಾಡಿನ ಮೃಗಗಳೊಂದಿಗೆ ಆಡುತ್ತಿದ್ದೆ.

ಜಗ: ಪಾಪ! ನಿನ್ನನ್ನು ಹೆತ್ತ ತಂದೆತಾಯಿಗಳು ಯಾರೋ ತಿಳಿದಿಲ್ಲ. ಗುರುಸ್ವಾಮಿ ಯತಿಗಳು ನನ್ನ ವಂಶೋದ್ಧಾರಕ್ಕಾಗಿ ನಿನ್ನನ್ನು ಅನುಗ್ರಹಿಸಿ ಕೈಗಿತ್ತರು. ಸಾಕುವ ಭಾರ ನನ್ನ ಮೇಲಿದೆ ಕಂದಾ. ನಮ್ಮ ರಜಪೂತ ವಂಶವು ಬಹು ದೀರ್ಘವಾಗಿತ್ತು. ಯೋಗವಿಲ್ಲದೆ ಹೀನವಾಗುತ್ತಿದೆ.

ರಣ: ಅಪ್ಪಾ! ನಮ್ಮ ವಂಶವನ್ನು ಉನ್ನತಿಗೊಳಿಸಲು ನಮ್ಮ ಬಲ ಸಾಲದೆ?

ಜಗ: ಸಾಕು. ಆದರೆ, ಕಾಲ ಸನ್ನಿಹಿತವಾಗಬೇಕಲ್ಲವೆ? ಮತ್ತು

ನನ್ನ ಅಣ್ಣನೊಬ್ಬ ಮಯೂರಧ್ವಜನೆಂಬವ ನಗಪುರದಧಿಪತಿ ರಾಯಸಿಂಹನ ಸೇನಾನಾಯಕನಾಗಿರುವನು.

ರಣ: ಅಪ್ಪಾ! ಆ ಸೇನಾನಾಯಕನಿಗೆ ಅಂಜಿ ನಾವು ಹಿಂದುಳಿಯುವುದೇ?

ಜಗ: ಮಗೂ, ತಾಳಿಕೊಂಡಿರು. ಉದ್ರೇಕಗೊಳ್ಳದಿರು. ಬೇಹುಗಾರರು ಇಲ್ಲೇ ಇರುವಂತಿದೆ. ಯಾರೋ ಬರುತ್ತಿರುವರು. (ದೂತನು ಪ್ರವೇಶಿಸಿ) ಜಗಮಲ್ಲರೇ, ನಮ್ಮ ಸೇನಾನಾಯಕರು ಈ ಪತ್ರವನ್ನು ನಿಮಗೆ ತಲಪಿಸುವಂತೆ ತಿಳಿಸಿದ್ದಾರೆ. (ಎಂದು ಪತ್ರ ಕೈಗಿತ್ತು ತೆರಳುವನು.)

ಜಗ: (ಓದಿ) ಕಂದಾ! ನನಗೊಂದು ಕರೆಯೋಲೆ ಬಂದಿದೆ. ಅಣ್ಣನ ಪತ್ರ. ಇಂದು ಸಂಜೆ ಮಾತಾಡಲು ಏಕಾಂತವಾಗಿ ಉದ್ಯಾವನದಲ್ಲಿ ಸಿಗಬೇಕಂತೆ. ವೀರ ಕತ್ತಿ ಕೈಯಲ್ಲಿರಬೇಕಂತೆ. ವೇಳೆ ಮೀರುತ್ತಿದೆ, ಮಗೂ, ಜಾಗ್ರತೆಯಾಗಿರು. ನಾನು ಬರುತ್ತೇದೆ. ಒಂದುವೇಳೆ......(ಅವನತ ಕಂಧರನಾಗುವನು.)

ರಣ: ಅದೇನಪ್ಪಾ, ಅರ್ಧೋಕ್ತಿಯಲ್ಲೇ ನಿಲ್ಲಿಸಿದಿರಿ?

ಜಗ: ಅಧೀರನಾಗಬೇಡ ಮಗೂ, ಬಾರದೆ ಉಳಿದೆನಾದರೆ ನಿನ್ನ ಗತಿ?

ರಣ: (ಆಶ್ಚರ್ಯ) ಅದೆಂತಹ ಮಾತು? ನಾನು ಜೊತೆಗೆ ಬರುವೆನು.

ಜಗ: ಕುಮಾರ! ನಾನೊಬ್ಬನೆ ಕಾಣಸಿಗಬೇಕಂತೆ. ಅಣ್ಣನೇ ಆಹ್ವಾನಿಸಿದ ಮೇಲೆ ಭಯವೇಕೆ? ಒಂದು ಮಾತು ನೆನಪಿರಲಿ. ನಮ್ಮ ವಂಶದಲ್ಲಿ ಬೆಳೆದ ಕಲ್ಯಾಣಿ ಕುಮಾರಿಯು ನನ್ನನ್ನೇ ವಿವಾಹವಾಗಬೇಕೆಂದು ಮನವಿರಿಸಿದ್ದಳು. ಆ ರಾಯಸಿಂಹನು ಅಪಹರಿಸಿದನು. ನನ್ನ ಸೇಡನ್ನು ಪೂರೈಸುವ ಭಾರ ನಿನ್ನದು.

ರಣ: ಅಪ್ಪಾ, ನಿಮ್ಮ ಮಾತುಗಳಿಂದ ಬಹಳ ಸಂಶಯವಾಗುತ್ತಿದೆ.

ಜಗ: ಭಯಪಡುವ ಪ್ರಸಂಗವಿಲ್ಲ. ವಂಶಮಾತೆ ಕರುಣಿಸಲಿ! ವಂಶವು ಕೀರ್ತಿಯಿಂದ ಸಾಗಲಿ! (ಇಬ್ಬರೂ ಆಲಿಂಗಿಸಿಕೊಳ್ಳುವರು. ತೆರೆ ಬೀಳುವುದು.)

ದೃಶ್ಯ ೩

(ವನಪ್ರದೇಶ. ಶೀಲಾವತಿಯು ಹೂ ಹಣ್ಣುಗಳನ್ನು ಹಿಡಿದು ಹಾಡುತ್ತ ಪ್ರವೇಶಿಸುವಳು.)

(ಸ್ವಗತ) ವೇಳೆ ಮೀರುತ್ತಿದೆ. ಕಾಳಿಕಾಗುಡಿಯಿಂದ ಹೊರಟು

ಬಹಳ ಹೊತ್ತಾಯಿತು. ಹಾಡಿನಲ್ಲೇ ನ್ಯೆಮರೆತೆ. ಈ ಕಾಡಿನಲ್ಲಿ ಖಳ ನಾಯಕರು ವಾಸಿಸುವರೆಂದು ಬೇಹುಗಾರರಿಂದ ತಿಳಿದಿದೆ. ಬೇಗನೆ ಅರ ಮನೆ ಸೇರುವುದೊಳಿತು. (ಎದುರಾಗಿ ವಿಲಾಸಸಿಂಹನೂ, ಎಚ್ಚಣ್ಣನೂ ಪ್ರವೇಶಿಸುವರು.)

ವಿಲಾಸ: ಎಚ್ಚಾ! ಎಂತಹ ಗಾನ! ಇಂಪಾದ ಕೋಗಿಲೆ ಕಂಠವನ್ನು ಮೀರುತ್ತಿದೆ. ಇರಲಿ. ಇವಳನ್ನು ಮಾತಾಡಿಸುವ ಬಗೆ ಹೇಗೆ? ನೀನು ಮಾತಾಡಿಸು.

ಎಚ್ಚಣ: ಅಯ್ಯೊ, ಹೇಗೆ ಮಾತಾಡಿಸಲಿ, ಒಡೆಯಾ! ನಿಮ್ಮ ವಿಷಯ ಮಾತಾಡಲೊ! ನನ್ನ ವಿಷಯವೊ! ಅವಳ ವಿಷಯವೊ?

ವಿಲಾಸ: ಲೇ ಮಂಕೆ! ನನ್ನ ವಿಷಯ ಮಾತಾಡಿಸು. ಅಮ್ಮಾ ಎಂದು ಸಂಬೋಧಿಸು.

ಎಚ್ಚಣ: (ಲೀಲಾವತಿಯನ್ನು ಕುರಿತು ಚೇಷ್ಟೆಯಿಂದ) ಅ-ಅ-ಅಮ್ಮಾ, ನಿನ್ನನ್ನು ಬ್ರಹ್ಮನು ನನಗಾಗಿ ಸೃಷ್ಟಿಸಿರುವಂತಿದೆ. ಹಾಯ್, ನಿನ್ನ ಕಂಠವೇ! ಇನ್ನೊಮ್ಮೆ ಹಾಡುವಿಯಾ? ನಾಟ್ಯ ಬರುತ್ತೇ?

ವಿಲಾಸ: ಲೇ ಮಂಕೇ! ನೆತ್ತಿಗೇರುತ್ತಿದೆ ಮಾತು! ಬಿಗಿಹಿಡಿ!

ಎಚ್ಚ: ಒಡೆಯಾ, ಅವಳಿಗೆ ಬಹುಶಃ ಬಾಯಿಬರುವಂತಿಲ್ಲ. ಪಿಳಿ ಪಿಳಿಯಾಗಿ ನೋಡುತ್ತಿರುತ್ತಾಳೆ.

ವಿಲಾಸ: ನಿನ್ನಂಥವನನ್ನು ನೋಡಿದರೆ ಎಲ್ಲರ ಕಣ್ಣುಗಳೂ ಹಾಗೇ ಆಗುವುವು. ನಾನೇ ಮಾತಾಡಿಸುತ್ತೇನೆ. ನೀನು ಅತ್ತ ಸರಿ. ಮನೋ ಹರೆ! ಏಕೆ ಭಯಪಡುತ್ತಿರುವೆ! ಬಳುಕುವ ನಿನ್ನ ಶರೀರವನ್ನು ನಿಂತು ದಣಿಸಬೇಡ. ಕಾಮಿನೀ, ನಿನ್ನ ರೂಪವನ್ನು ಎಷ್ಟು ವರ್ಣಿಸಿದರೂ ಸಾಲದು. ನಿನ್ನನ್ನು ಪ್ರೇಮಿಸಿ ಬಂದ ನನ್ನ ಮೇಲಿರಿಸು ಪ್ರೀತಿ. ನಾಲ್ಕು ಮಾತುಗಳನ್ನಾಡು.

ಶೀಲಾ: ವೀರಾ, ನಮ್ಮಂತಹ ಅಬಲೆಯರನ್ನು ಕಂಡೊಡನೆ ಕೆರಳು ವುದು ಸ್ವಾಭಾವಿಕ. ನಿನ್ನ ಪರಿಚಯವಾಗಿಲ್ಲವಲ್ಲ!

ವಿಲಾಸ: ಎಚ್ಚಣ್ಣ! ನನ್ನ ಪರಿಚಯವನ್ನು ಹೇಳಿಬಿಡಪ್ಪ!

ಎಚ್ಚಣ್ಣ: ಹೇಗೆ ಕರೆಯಲಿ?

ವಿಲಾಸ: ನಮ್ಮಾಕೆಯೆಂದೇ ಕರೆ

ಎಚ್ಚಣ್ಣ: ಲೇ! ನಮ್ಮವಳೇ, ಇವರು........

ವಿಲಾಸ; ಮುಚ್ಚುಬಾಯಿ! ಕತ್ತೆ!

ಎಚ್ಚಣ್ಣ: ಮನೋಹರಿ! ಪರಿಚಯ ಕೇಳು ಲೋಕೈಕ ವೀರರ ಗಂಡ—ರಿಪುಗಂಡ ಬೇರುಂಡ—ಖಳನಾಯಕ ಎಚ್ಚಣ್ಣನಾಯಕರ ಮಂತ್ರಿ. ವಿಲಾಸಸಿಂಹನೆಂದರೆ........

ವಿಲಾಸ: ಥೂ, ಮುಚ್ಚುಬಾಯಿ! ನಿನ್ನ ತಲೆಯು ಜೋಕೆಯಿರಲಿ!

ಶೀಲಾ: ವೀರಾ! ನಿಮ್ಮ ಪರಿಚಯ ತಿಳಿದೆನು. ನನಗೆ ಖಳನಾಯಕೆಯಾಗಲು ಮನವಿಲ್ಲ. ನಾನು ರಜಪೂತ ವಂಶದವಳು. ಬಂದದಾರಿಗೆ ಸುಂಕವಿಲ್ಲ. ತೆರಳಬಹುದು.

ವಿಲಾಸ. ಹೆಚ್ಚು ಮಾತಿಗೆ ಅವಕಾಶವಿಲ್ಲ. ನಿನ್ನ ಕಾಯಿಯ ಅವಸ್ಥೆ ಏನಾಯಿತೆಂದು ಬಲ್ಲೆಯಾ? ಬಲಾತ್ಕಾರದಿಂದ ಅಪಹರಿಸಿಬಿಡುವೆನು.

ಶೀಲಾ: ಮೂರ್ಖ! ಬಲಾತ್ಕಾರಕ್ಕೆ ಅಂಜುವ ಹೆಣ್ಣೆಂದು ಭಾವಿಸಬೇಡ. ನಿಲ್ಲು ದೂರ! (ಕತ್ತಿಯನ್ನು ತೆಗೆದು) ನನ್ನ ದೇಹವಲ್ಲಿ ವೀರರಕ್ತ ಹರಿಯುತ್ತಿದೆ!

ಎಚ್ಚಣ್ಣ: (ಭಯದಿಂದ) ಒಡೆಯಾ, ಬೇಡ! ಇವಳಾರು ಮಾರಿಯೋ ಏನೊ! ನಿಮ್ಮ ಮೀಸೆಗಂಜುವವಳಲ್ಲ.

ವಿಲಾಸ: ಸಾಕು, ಕತ್ತೆ, ನಿನ್ನ ಹುಚ್ಚು ಮಾತು! ಬಲಾತ್ಕಾರದಿಂದ ಒಯ್ಯುವೆನು. ಹಿಡಿ ಇವಳನ್ನು. (ಆಗ "ಜೈ ಭುವನೇಶ್ವರೀ! ನಿಲ್ಲು ಮೂರ್ಖ!" ಎನ್ನುತ್ತಾ ರಣಮಲ್ಲನು ಕತ್ತಿಬೀಸುತ್ತ ಪ್ರವೇಶಿಸುವನು. ವಿಲಾಸಸಿಂಹನು ಓಡುವನು. ಎಚ್ಚಣ್ಣನು ರಣಮಲ್ಲನ ಕೈಗೆ ಸಿಕ್ಕಿ, ಗುದ್ದುತಿಂದು ಬೊಬ್ಬಿಡುತ್ತಾ ಓಡುವನು. ಶೀಲಾವತಿ ಬಾಗಿ ನಿಲ್ಲುವಳು.)

ರಣ: ತಂಗೀ, ಯಾರಮ್ಮ ನೀನು? ಯಾಕಾಗಿ ಖಳನ ಕೈಗೆ ಸಿಲುಕಿದೆ? ಅಂಜಬೇಡ.

ಶೀಲಾ: ಮಹಾತ್ಮಾ, ಕಾಳಿಕಾಪೂಜೆ ಮುಗಿಸಿ ಹೊರಟಾಗ ದಾರಿಯಲ್ಲಿ ಖಳನ ಕೈಗೆ ಸಿಲುಕಿದೆ. ರಜಪೂತ ವಂಶದ ಕಲ್ಯಾಣಿದೇವಿಯವರ ಮಗಳು. ನನ್ನ ಪ್ರಾಣವನ್ನುಳಿಸಿದ ನಿಮ್ಮ ಪರಿಚಯ ಕೇಳಲೆ?

ರಣ: ತಂಗೀ, ನನ್ನ ಪರಿಚಯ ನನಗೇ ತಿಳಿದಿಲ್ಲ. ಇರಲಿ. ನೀನು ತ್ವರಿತವಾಗಿ ಮನೆಸೇರು. ನಿನ್ನನ್ನು ಅಲ್ಲಿತನಕ ಬಿಟ್ಟುಬರುತ್ತೇನೆ.

ಶೀಲಾ: ನಮ್ಮ ರಾಜ್ಯಕ್ಕೆ ಬಂದು ಮಾನ್ಯತೆ ಪಡೆಯಬಾರದೆ?

ರಣ: ಬರುತ್ತೇನೆ ಸಹೋದರಿ, ಬರುತ್ತೇನೆ. ಒಂದು ಆಸೆಯನ್ನು ನೆರವೇರಿಸಲು ಬರುತ್ತೇನೆ. ಹೋಗು.

ಶೀಲಾ: ನಿಜವಾಗಿಯೂ ಬರುತ್ತೀರಾ? ನಾನು ಹೋಗಲೆ? ಪ್ರೀತಿ ಇರಲಿ. ನಾನು ನಿಮ್ಮನ್ನಲ್ಲದೆ........

ರಣ: ಛೀ! ನೀನು ಸಾಮಾನ್ಯಳಲ್ಲ. ಕ್ಷುಲ್ಲಕ ವಿಚಾರಕ್ಕೆ ಮನ ವಿರಿಸಬೇಡ. (ತೆರಳುವಳು. ರಣಮಲ್ಲನು ಗಲ್ಲಕ್ಕೆ ಕೈಯೂರಿ) ಛೆ! ಇವಳು ನನ್ನ ವಂಶದವಳು. ಪ್ರೀತಿಯನ್ನಿರಿಸಿದ್ದಾಳೆ. ಆದರೆ, ನನ್ನ ತಂದೆಯವರ ಆಸೆ. ಮನಸ್ಸೆಲ್ಲಾ ಕಳವಳ. ತಂದೆ ಬಂದಿರಬಹುದೆ?

(ತೆರಳುವನು. ತೆರೆ.)

ದೃಶ್ಯ ೪

(ಉದ್ಯಾನವನ: ಜಗಮಲ್ಲನು ಪ್ರವೇಶಿಸುವನು.)

(ಅತ್ತಿತ್ತ ನೋಡಿ) ಸಹೋದರನು ಏಕೆ ಓಲೆಯನ್ನು ಕಳುಹಿಸಿದನು? ಏಕೆ ಇನ್ನೂ ತೋರುವುದಿಲ್ಲ? ಮನಸ್ಸು ಕಳವಳಗೊಳ್ಳುತ್ತಿದೆ. ಸಹೋದರನಲ್ಲವೆ? ಧೈರ್ಯಗೆಡುವ ಪ್ರಸಂಗವೇನು? ಕಾಲಸಪ್ಪಳ ಕೇಳುತ್ತಿದೆ. ಅವನೇ ಇರಬಹುದು. (ಮಯೂರಧ್ವಜನು ಪ್ರವೇಶಿಸಿ) ಓಹೊ, ಕಾದಿರುವೆಯಾ ತಮ್ಮಾ? ಬಾ! (ಆಲಿಂಗಿಸುವನು)

ಜಗ: ಕ್ಷೇಮವಷ್ಟೆ ಅಣ್ಣಾ?

ಮಯೂರ: ಹೌದು ತಮ್ಮಾ! ಮಾತೆ ಭುವನೇಶ್ವರಿಯ ಕೃಪೆಯಿಂದ ಕ್ಷೇಮ. ಒಂದೇ ವೃಕ್ಷದ ಎರಡು ಶಾಖೆಗಳಂತಿರುವ ನಮ್ಮನ್ನು ವಿಧಿಯು ಅಗಲಿಸಿತು.

ಜಗ: ಆದರೆ, ಧೈರ್ಯಗೆಡುವ ಪ್ರಸಂಗವೇನೂ ಇಲ್ಲ. ನೀವು ರಾಜನಾಶ್ರಯದಲ್ಲಿ ಇರುವುದು. ನಾನು ಕಾಡಿನಲ್ಲಿ ಇರುವುದು.

ಮಯೂರ: ಮಗೂ, ಸ್ವಾತಂತ್ರ್ಯವನ್ನು ಕಳೆದು ಪರಾಶ್ರಯದಲ್ಲಿರುವುದು ನನ್ನ ಹೇಡಿತನ. ಅದರಲ್ಲೂ ರಾಜಾಶ್ರಯವೆ?

ಜಗ: ಅದಿರಲಿ. ನನ್ನನ್ನೇಕೆ ಬರಹೇಳಿದೆ? ವಿಷಯವನ್ನು ಮರೆತೇಬಿಟ್ಟೆನು.

ಮಯೂರ: ತಮ್ಮಾ, ನಾನೂ ನೀನೂ ಬೇರೆಯಾಗುವುದು ಸಮ್ಮತವಲ್ಲ. ನಮ್ಮ ಆಸ್ಥಾನಕ್ಕೆ ಬಂದು ಸುಖವಾಗಿರಬಾರದೇಕೆ?

ಜಗ: ಸ್ವಾತಂತ್ರ್ಯವನ್ನು ಕಳೆದುಕೊಳ್ಳಲೆ? ಆದರೆ, ಬರುತ್ತೇನೆ. ಹಗೆತನವನ್ನು ತೀರಿಸದ ವಿನಹ ಎಲ್ಲಿಯ ಸುಖ?

ಮಯೂರ: ಅವನು ಕ್ಷತ್ರಿಯು. ನಾವು ದುರ್ಬಲರು. ಅಲ್ಲವೆ?

ಜಗ: ಅಣ್ಣಾ! ದುರ್ಬಲತ್ವವನ್ನು ವಿಧಿಯು ನಮ್ಮ ಪಾಲಿಗೆ ವಿಧಿಸಲಿಲ್ಲ. ಅದಿರಲಿ, ಬಂದ ಕಾರ್ಯವನ್ನಾದರೂ ಹೇಳು.

ಮಯೂರ: ಹೇಳಬೇಕೆ? ನೀನು ರಾಜಾಜ್ಞೆಗೆ ಒಳಗಾಗಿರಬೇಕು.

ಜಗ: ಇಲ್ಲವಾದರೆ?

ಮಯೂರ: ನಾನು ಸೇನಾನಾಯಕ. ನಿನ್ನನ್ನು ಚತುರೋಪಾಯಗಳಿಂದ ದಂಡಿಸುವುದು ನನ್ನ ಧರ್ಮ.

ಜಗ: ಹೇಗೆ ಸಾಧಿಸುವಿ?

ಮಯೂರ: ನಾನೂ ನೀನೂ ಬಾಹಾಬಾಹಿಯಾಗಿ ಹೊಡೆದಾಡಿ ಸತ್ಯತ್ವವನ್ನು ಇತ್ಯರ್ಥಗೊಳಿಸುವ.

ಜಗ: ಎಂತಹ ಮಾತಿದು ಅಣ್ಣಾ? ಹಾಯ್! ರಾಜಸೇವೆಗಾಗಿ ವಂಶವನ್ನು ಮರೆತು ಯಾರೊಡನೆ ಹೋರಾಡುವೆ? ನಾನು ನಿನ್ನ ಮುಂಭಾಗದಲ್ಲಿ ಮಲೆದಾಡಬೇಕೆ?

ಮಯೂರ: ಮಗೂ, ನಾಳೆಯಾದರೂ ನೀನು ಹಗೆತನವನ್ನು ತೀರಿಸಲು ಬಂದಾಗ ನಾನೇ ಮೊದಲು ನಿನಗೆ ಎದುರಾಗಬೇಕಾಗಿದೆ. ಆಗ ಏನು ಮಾಡುವಿ?

ಜಗ: ಆ ಸಮಯ ಹೇಳಬರುವಂತಿಲ್ಲ. ಅಣ್ಣಾ, ನೀನು ನನಗೆ ಪಿತೃಸಮಾನ. ತಂದೆಯವರು ಕೊಟ್ಟಿರುವ ಈ ಕತ್ತಿಯನ್ನು ನಿನಗಾಗಿ ಎತ್ತಬೇಕೆ? ಇಲ್ಲ! ಇದೋ, ನಿನಗಾಗಿ ಅರ್ಪಿಸುತ್ತಿದ್ದೇನೆ. ರಾಜಸೇವೆಗಾಗಿ ಮನಬಂದಂತೆ ಮಾಡು. (ಕತ್ತಿಯನ್ನು ಕೆಳಗಿರಿಸಿ ಮೊಣಕಾಲೂರಿ ಶಿರಬಾಗಿಸುವನು.)

ಮಯೂರ: ಅಯ್ಯೋ, ವಿಧಿಯು ಉಭಯಸಂಕಷ್ಟಕ್ಕೀಡುಮಾಡಿತು. ಈಗೇನು ಮಾಡಲಿ? ಜನ್ಮಜನ್ಮಗಳಲ್ಲೂ ಒಂದೇ ಕರುಳಿನ ತುಂಡಾಗಿ ಸಹೋದರರಾಗಿ ಹುಟ್ಟಬೇಕಾದರೆ ಭಾಗ್ಯಬೇಕು. ಭುವನೇಶ್ವರಿಯು

ಕರುಣಿಸಿದರೂ ನಾವೀಗ ಆ ಸುಯೋಗವನ್ನು ವಂಚಿಸಿಕೊಳ್ಳುತ್ತೇವೆ. ಭಗವಾನ್! (ಒಂದು ಕ್ಷಣ ಆಲೋಚಿಸಿ) ಛೀ! ಅಂಜಲಾರೆ. ಕರ್ಮಸಾಕ್ಷಿ ಸೂರ್ಯದೇವನೇ, ನಾವು [redacted] ತಮ್ಮಂದಿರು ಸತ್ಯ. ಆದರೆ, ರಾಜಕಾರ್ಯಕ್ಕಾಗಿ ಈ ಕೃತ್ಯವನ್ನು ಮಾಡುತ್ತಿದ್ದೇನೆ. ಅನ್ಯಥಾ ಭಾವಿಸದಿರಿ. ಅಪವಾದವನ್ನು ಹೊರಿಸದಿರಿ. ತಮ್ಮಾ (ಒಮ್ಮೆ ಆಲಿಂಗಿಸುವನು. ಬಳಿಕ ಮಯೂರಧ್ವಜನು ಕತ್ತಿಯನ್ನೆತ್ತಿ "ಜೈ ಭುವನೇಶ್ವರೀ" ಎಂದು ಜಗಮಲ್ಲನ ಶಿರವನ್ನುರುಳಿಸುವನು." ಹಾಯ್! ಎನ್ನುತ್ತಾ ಮಯೂರಧ್ವಜನು ಉರುಳುವನು. (ತೆರೆ ಬೀಳುವುದು).

ದೃಶ್ಯ [redacted]

(ಉದ್ಯಾನ. ಶೀಲಾವತಿಯು ಒಬ್ಬಳೆ ಹಾಡುತ್ತಿರುತ್ತಾಳೆ. ನಿಲ್ಲಿಸಿ)

ಆಹಾ! ಎಂತಹ ಸುಂದರಮೂರ್ತಿ! ಎಂದು ಕಾಣಲಿ? ಹೆಸರನ್ನೇಕೆ ಹೇಳಲಿಲ್ಲ? ಮನ್ಮಥನನ್ನು ಹೋಲಿಸುವ ಅಂಗಸೌಷ್ಠವ. ಕ್ಷಣವನ್ನೆಂತು ಕಾಟಲಿ? (ಪುನಃ ಹಾಡುವಳು. ರಣಮಲ್ಲನು ಪ್ರವೇಶಿಸಲು ಶೀಲಾವತಿ ಎದ್ದು ಎದುರಾಗಿ ಓಡಿಬರುವಳು.)

ರಣ: ತಂಗೀ, ಶಾಂತಳಾಗು. ಇದೇನು ಈ ಪರಿ ಚೇಷ್ಟೆ? ಏಕಾಂಗಿನಿಯಾಗಿರುವಿ?

ಶೀಲಾ: ಹೌದು, ನೀವು ಬರುತ್ತೀರಿ ಎಂದೇ ಕಾದಿದ್ದೆ. ಬನ್ನಿರಿ, ಕುಳಿತುಕೊಳ್ಳಿರಿ.

ರಣ: ಸಹೋದರಿ! ಪ್ರಾಯ ಬಂದ ತರುಣ-ತರುಣಿಯರು ಏಕಾಂತವಾಸದಲ್ಲಿರಬಾರದಷ್ಟೆ?

ಶೀಲಾ: ಇರಬಹುದು. ಪ್ರಾಯದ ತರುಣ ತರುಣಿಯರೀರ್ವರೂ ಒಂದಾಗಿ ಏಕಾಂತದಲ್ಲಿರಬಾರದೇಕೆ? ತಪ್ಪೆ?

ರಣ: ಛೀ! ಅಸಂಬದ್ಧವಾಗಿ ಮಾತಾಡದಿರು. ನಾನು ಬಂದ ಕಾರ್ಯವೇ ಬೇರೆ.

ಶೀಲಾ: ಅದಾವುದು? ನನ್ನೊಡನೆ ಹೇಳಬಾರದೆ?

ರಣ: ನಿನ್ನೊಡನೆ ಹೇಳುವ ವಿಷಯವಲ್ಲ. ವೇಳೆ ಮೀರುತ್ತಿದೆ. ಬರುತ್ತೇನೆ.

ಶೀಲಾ: ಹಾಂ! ಅದಾವ ನ್ಯಾಯ? ನಮ್ಮಿಬ್ಬರನ್ನೂ ವಿಧಿಯು ಒಂದು ಗೂಡಿಸಿದೆ.

ರಣ: ಸಂತೋಷ. ಅಣ್ಣ-ತಂಗಿಯರಾಗಿ ವಾತ್ಸಲ್ಯ ತುಂಬಿರುವಂತೆ ವಿಧಿಯನ್ನೇ ಬೇಡುವ. ಹಿಂದೆ ನಾವು ಅಣ್ಣ-ತಂಗಿಯರಾಗಿದ್ದೆವು. ವಿಧಿ ಜ್ಞಾಪಿಸಿತು.

ಶೀಲಾ: ಅಲ್ಲ. ಹಾಗನ್ನಬಾರದು. ನಾನು ನಿಮ್ಮ........

ರಣ: ಪ್ರೀತಿಯ ಸಹೋದರಿ, ಬರುತ್ತೇನೆ. (ತೆರಳುವನು. ಶೀಲಾವತಿ ಅವನ ಕೈಹಿಡಿದೆಳೆಯಲು, ಫಕ್ಕನೆ ರಾಯಸಿಂಹನು ಪ್ರವೇಶಿಸಿ ಕೋಪದಿಂದ—)

ಥೂ ಮೂರ್ಖ! ಅಪರಿಚಿತ ಧೂರ್ತನು ಬಂದು ಅನ್ಯಾಯದಿಂದ ವರ್ತಿಸುವನು. ಯಾರಲ್ಲಿ? ವನಪಾಲಕರೇ, ಬನ್ನಿ. (ವನಪಾಲಕರು ಬರುವರು.)

ಶೀಲಾ: ಅಪ್ಪಾ, ಕ್ಷಮಿಸು! ಈ ಹಿಂದೆ ನನ್ನ ಪ್ರಾಣದಾನಮಾಡಿದ ಮಹಿಮರಿವರು. ನಿರಪರಾಧಿಗಳಿವರು.

ರಾಯ: ಸಾಕು, ಮುಚ್ಚು ಬಾಯಿ. ನಡೆ, ಅರಮನೆಗೆ. ಹುಂ! ಇವನನ್ನು ಕಾರಾಗ್ರಹಕ್ಕೆ ಒಯ್ದು ಬಿಡಿ.

(ವನಪಾಲಕರು ರಣಮಲ್ಲನ ಕೈಗೆ ಸಂಕೋಲೆಯನ್ನು ಹಾಕಿ ಒಯ್ಯುವರು.) (ತೆರೆ ಬೀಳುವುದು.)

ದೃಶ್ಯ ೩

[ವಿಲಾಸಸಿಂಹನೂ ಎಚ್ಚಣ್ಣನೂ ಪ್ರವೇಶಿಸುವರು.]

ವಿಲಾಸ: ಛೇ! ಎಂತಹ ಮೋಸವಾಯಿತು ಎಚ್ಚಣ್ಣಾ! ಕೈಗೆ ಸಿಕ್ಕಿದ ತುತ್ತು ಬಾಯಿಗೆ ಬರದಾಯ್ತಲ್ಲಾ? ಯಾವನೋ ಅವನೊಬ್ಬ ಧೂರ್ತ. ಸಮಯವನ್ನಂತು ಸಾಧಿಸಿದನೊ? ಇನ್ನೇನು ಮಾಡೋಣ?

ಎಚ್ಚಣ್ಣ: ಹೆಣ್ಣಿನ ವಿಷಯಗಳೇ ಹೀಗೆ. ಪದ್ಯವಿದೆ: "ಹೊನ್ನಿಗೆ ಸೋತರೆ ಹೆಣ ನೀನಾಗುವಿ; ಹೆಣ್ಣಿಗೆ ಸೋತರೆ ಮಣ್ಣೇ ಮುಕ್ಕುವಿ...."

ವಿಲಾಸ: ಸಾಕು, ಹರಟೆ. ಹೇಡಿತನದ ಪದ್ಯವದು.

ಎಚ್ಚಣ್ಣ: ಅಲ್ಲ ಒಡೆಯಾ. ತ್ರಿಲೋಕ ವಿಜಯಿ ರಾವಣನೆಂಬವನು ಸೀತೆಯೆಂಬವಳನ್ನು ಕದ್ದು ಮಣ್ಣೇ ಮುಕ್ಕಿರುವನಂತೆ.

ವಿಲಾಸ: ಜನನ ಮರಣ ನಾವು ನಿಶ್ಚಯಿಸುವುದಲ್ಲ. ಅದಂತಿರಲಿ. ಈಗೇನು ಮಾಡೋಣ? ಮೊದಲು ಆ ರಾಯಸಿಂಹನನ್ನು ಕೆಡಹಬೇಕು.

ಎಚ್ಚಣ್ಣ: ಅಬ್ಬಾ! ಆ ರಾಯಸಿಂಹನನ್ನ? ವಿಷವುಳ್ಳ ಸರ್ಪದಿಂದ ಮಣಿ ದೊರೆವುದು ಹೇಗೆ ಅಸಾಧ್ಯವೋ, ಅಂತೆಯೇ ಆ ಸೇನಾನಾಯಕ ಮಯೂರಧ್ವಜನನ್ನು ಇದಿರಿಸುವ ಬಗೆ ಹೇಗೆ? ಯಾರು?

ವಿಲಾಸ: ಲೇ ಮಂಕೆ! ಅವನು ಯಾರೋ ಜಗಮಲ್ಲನೆಂಬವನೊಡನೆ ಖಾಡಾಖಾಡಿಯಾಗಿ ಹೊಡೆದಾಡಿ ಇಬ್ಬರೂ ಸತ್ತುಹೋಗಿರುವರಂತೆ.

ಎಚ್ಚಣ್ಣ: ಸುಳ್ಳು ಇರಬಹುದು. ನಮ್ಮನ್ನೆಲ್ಲಾ ಮೋಸಗೊಳಿಸುವ ವಾರ್ತೆಯಿದು.

ವಿಲಾಸ: ಸುಮ್ಮನಿರೋ! ಸಂಶಯವೇ ಬೇಕಾಗಿಲ್ಲ. ನಮ್ಮ ಪಡೆಯವರೆಲ್ಲಾ ಇಂದೇ ಆ ನಗಪುರವನ್ನು ಮುತ್ತಿಕೊಳ್ಳಿರಿ. ಆಜ್ಞಾಪಿಸು.

(ತೆರಳುವರು. ತೆರೆ ಬೀಳುವುದು.)

ದೃಶ್ಯ ೭

[ಕಾರಾಗೃಹ. ರಣಮಲ್ಲನು ಶೃಂಖಲೆಯಿಂದ ಬದ್ಧನಾಗಿ ಗಲ್ಲಕ್ಕೆ ಕೈಯೂರಿ ಕುಳಿತಿರಲು, ಶೀಲಾವತಿಯು ಪ್ರವೇಶಿಸುತ್ತಾ]

ಅಯ್ಯೋ, ದುರ್ವಿಧಿಯು ವಂಚಿಸಿತು! ಹೇಗೆ ಮುಖ ತೋರಿಸಿ ಮಾತಾಡಲಿ? ನನ್ನ ದುರ್ವರ್ತನೆಯಿಂದ ನಿರಪರಾಧಿಯೂ ಅಪರಾಧಿಯೆನಿಸಿದನು. ಈಗ ಸುಮ್ಮನಿರಲೆ? ಆ ಖಳನಾಯಕನು ನಮ್ಮ ರಾಜ್ಯವನ್ನು ಸೂರೆಗೊಳ್ಳುವನು. ಹೇಗೂ ಇರಲಿ. ಈ ಮಹಾತ್ಮನೊಡನೆ ಅಂಗಲಾಚಿ ಕಾರ್ಯವನ್ನು ಪೂರೈಸಬೇಕು. (ಕ್ಷಣಕಾಲ ರಣಮಲ್ಲನನ್ನೇ ನೋಡುತ್ತಾ ನಿಂತು, ಬಳಿಕ ಶಿರಬಾಗಿಸಿ) ಮಹಾತ್ಮ, ಅಪರಾಧಿನಿ ನಾನು! ಕ್ಷಮಿಸು! ನಿನ್ನಲ್ಲಿ ಒಂದು ವಿಷಯವನ್ನು ಹೇಳಬಯಸುತ್ತೇನೆ.

ರಣ:............

ಶೀಲಾ: ಮೌನವೇ? ಕೋಪವಿರಬಹುದು. ಕ್ಷಮಾ ಯಾಚಿಸಿದ ಮೇಲೆಂತು ಕೋಪ? ಮಾತಾಡಬಾರದೇ?

ರಣ: ತಂಗೀ, ನೀನು ವೀರಕುಮಾರಿ. ನಾನು ಸಾಮಾನ್ಯನು. ನನ್ನೊಡನೆ ಯಾವ ವಿಷಯವನ್ನು ಹೇಳಬಯಸುವೆ?

ಶೀಲಾ: ವೀರ! ನಿಮ್ಮ ಕೊಂಕುನುಡಿಗಳು ಶರದಂತೆ ಹೃದಯವನ್ನು ಚುಚ್ಚುತ್ತಿದೆ. ಇದೊಂದು ದುರ್ಭಾಗ್ಯ.

ರಣ: ಭಾಗ್ಯವನ್ನು ಕೆಣಕುವ ಚೈತನ್ಯ ನಮಗಿಲ್ಲ. ನಾವು ಅಂಥರಾಗಿ ದೈವವನ್ನೇಕೆ ದೂಷಿಸುವುದು? ಬಂದಿರುವ ವಿಚಾರವೇನು?

ಶೀಲಾ: ಉಪಕಾರ ಮಾಡುವಿಯಾದರೆ ಹೇಳುತ್ತೇನೆ.

ರಣ: ಒಲ್ಲೆನೆಂಬುವುದು ನಮ್ಮ ವಂಶಕ್ಕೆ ವಿರೋಧ. ವಿಷಯ ತಿಳಿಯದ ಮೊದಲು ನಿರ್ಧಾರವಾಗಲಾರದು.

ಶೀಲಾ: ವಿಲಾಸಸಿಂಹನೆಂಬ ಖಳನು ಅಂದು ನನ್ನನ್ನು ವಂಚಿಸಲು ಪ್ರಯತ್ನಿಸಿದಾಗ ನೀವೇ ಪ್ರಾಣದಾನ ಮಾಡಿದಿರಿ. ಈಗ ನಮ್ಮ ರಾಜ್ಯಕ್ಕೆ ದಂಡೆತ್ತಿ ಬಂದಿರುವನು. ನೀವು ಅವನಿಂದ....

ರಣ: ಅಯ್ಯೋ, ಈ ಮಾತು ಹೇಳಲು ಲಜ್ಜೆಯಾದರೂ ಆಗುವುದಿಲ್ಲವೆ? ಕೀರ್ತಿಪಡೆದ ವಂಶ ನಿಮ್ಮದು. ವೀರಕುವರಿ ನೀನು.

ಶೀಲಾ: ನಮ್ಮ ವಂಶ ಮೆರೆದುದು ಆ ಸೇನಾನಾಯಕ ಮಯೂರಧ್ವಜನಿಂದ. ಆದರೆ ನನ್ನ ತಂದೆಯ ವಂಶವಾವುದು? ನನ್ನ ವಂಶ........ (ದುಃಖಿಸುವಳು.)

ರಣ: ಏಕೆ ತಂಗಿ ಅಳುತ್ತಿರುವಿ? ನಿನ್ನ ತಾಯಿಯನ್ನು ರಾಯಸಿಂಹನು ಬಲಾತ್ಕರಿಸಿದ ವಿಷಯ ತಿಳಿದಿದೆ. ಮೊದಲು ಆ ಕಲ್ಯಾಣಿದೇವಿಯವರು ಜಗಮಲ್ಲನನ್ನು ವರಿಸಬೇಕೆಂದು ನಿಶ್ಚಯಿಸಿದ್ದರಂತೆ. ಆ ಜಗಮಲ್ಲನ ಸಾಕುಕುವರ ನಾನು. ತಿಳಿಯಿತೆ?

ಶೀಲಾ: (ಆಶ್ಚರ್ಯದಿಂದ) ಹಾಂ, ಏನು? ರಣಮಲ್ಲರಲ್ಲವೇ ನೀವು? ನಿಜವೇ.

ರಣ: ಹೌದು. ನನ್ನ ತಂದೆಯವರ ವಿರೋಧಿ ಆ ರಾಯಸಿಂಹನನ್ನು ಕೆಡಹುವುದೇ ನನ್ನ ಉದ್ದೇಶ. ನೀನಂದಂತೆ ಖಳನಾಯಕನಿಗೆದುರಾಗಿ ನಿನ್ನ ತಂದೆಯವರ ಪಕ್ಷದಲ್ಲಿ ಹೇಗೆ ಇರಲಿ? ಹೇಳು.

ಶೀಲಾ: ಅದು ನಿಮ್ಮಿಷ್ಟ. ಆದರೆ, ನನಗಾಗಿ ರಾಜ್ಯವನ್ನುಳಿಸಬೇಕು.

ರಣ: ತಂಗೀ, ಆಗಲಿ! ವಂಶಗೌರವವನ್ನು ಉಳಿಸುವೆನು. ಆದರೆ ನನ್ನ ಪರಿಚಯವನ್ನು ನಿನ್ನ ತಂದೆಯೊಡನೆ ಹೇಳಬೇಡ. ಹೋಗು.

(ತೆರಳುವಳು. ತೆರೆ.)

ದೃಶ್ಯ ೮

[ರಾಯಸಿಂಹನು ಆಸ್ಥಾನದಲ್ಲಿ ಕುಳಿತು ಮಂತ್ರಿಯೊಡನೆ]

ಮಂತ್ರಿಗಳೇ, ನಮ್ಮ ಸೇನಾನಾಯಕನು ಮಡಿದ ವಾರ್ತೆಯನ್ನು ಕೇಳಿಯೋ ಆ ಖಳರು ಮುತ್ತಿಗೆ ಹಾಕಿರುವರು. ಆದರೆ, ಹೆದರಬೇಕಾಗಿಲ್ಲ. ಖಳರುಗಳಾದರೂ ಕ್ಷತ್ರಿಯರಂತೆ ಯುದ್ಧಸನ್ನದ್ಧರಾಗಿ ಬಂದಿರುವರು. ನಾವು ಹೊರಡಬೇಕು. ಮೊದಲು ಆ ಕಾರಾಗೃಹದಲ್ಲಿರುವವನನ್ನು ಶೂಲಕ್ಕೇರಿಸಿ ಆ ಮೇಲೆ ಆಲೋಚನೆ. ಆ ಮೂರ್ಖನನ್ನು ಕರೆ ತನ್ನಿ. (ಮಂತ್ರಿ ತೆರಳುವನು. ಕ್ಷಣಕಾಲದಲ್ಲಿ ಬಂದು) ರಾಜಾ, ಆತನು ಕಾರಾಗೃಹದಲ್ಲಿಲ್ಲ. ಹೇಗೆ ತಪ್ಪಿಸಿದನೋ ಗೊತ್ತಿಲ್ಲ. (ಅಷ್ಟರಲ್ಲಿ "ಅಯ್ಯೋ, ಮಾನ ಉಳಿಸು, ಪ್ರಾಣ ಉಳಿಸು" ಎಂಬ ಕೂಗು ಕೇಳಿಸಲು, ಮಂತ್ರಿ ಓಡುವನು. ಆಗ ವಿಲಾಸಸಿಂಹನೂ ಹಿಂದಿನಿಂದ ರಣಮಲ್ಲನೂ ಓಡಿಬರುವರು. ರಾಯಸಿಂಹನು ರಣಮಲ್ಲನನ್ನು ಎದುರಿಸಿ) ನಿಲ್ಲು, ಮೂರ್ಖ! ತಪ್ಪಿಸಿ ಹೋಗುತ್ತಿರುವೆಯಾ? ನಿನ್ನನ್ನು ಶೂಲಕ್ಕೇರಿಸಬೇಕೆಂದು ನಿಶ್ಚಯಿಸಿರುವೆನು. ಕೊನೆಯ ಆಸೆಯಿದ್ದರೆ ಬೊಗಳು.

ರಣ: (ಕತ್ತಿಯನ್ನೆತ್ತಿ) ಎಲೈ ವಂಚಕ! ಹೆಂಗಳ್ಳ! ನನಗೆ ಶೂಲ? ಥೂ. ನಿಲ್ಲು ಯುದ್ಧಕ್ಕೆ! ಕೊನೆಯ ಆಸೆಯನ್ನು ನಿನ್ನಿಂದಲೇ ಪೂರೈಸುವೆನು.

ರಾಯಸಿಂಹ: ಬಾಯಿಗೆ ಬಂದಂತೆ ಗಳಹಬೇಡ. ಯೋಚಿಸು

ರಣ: ಯೋಚಿಸುವ ಸಮಯವಿದಲ್ಲ. ಬಿಸಿರಕ್ತ ಆರುತ್ತಿದೆ. ನಿಲ್ಲು. (ಕತ್ತಿಯನ್ನು ಬೀಸುವನು. ಸ್ವಲ್ಪ ಹೊತ್ತು ಯುದ್ಧಮಾಡಿ ರಾಯಸಿಂಹನು ಉರುಳುವನು. ಆಗ, "ಅಯ್ಯೋ, ಮಾನರಕ್ಷಕ! ಪ್ರಾಣರಕ್ಷಕ! ಕಾಪಾಡು" ಎಂದು ಬೊಬ್ಬಿಡುತ್ತಾ ಶೀಲವತಿಯೂ ಅವಳ ಹಿಂದಿನಿಂದ ಕತ್ತಿ ಹಿಡಿದು ವಿಲಾಸಸಿಂಹನೂ ಓಡಿಬರಲು, ರಣಮಲ್ಲನು ವಿಲಾಸಸಿಂಹನನ್ನು ಎದುರಿಸಿ) ಕಾಮುಕ! ನೀನಿನ್ನೂ ಬದುಕಿರುವೆಯಾ? ನಿನ್ನಂತಹ ಖಳರಿಂದ ಲೋಕ ಹಾಳಾಗುತ್ತಿದೆ. ನಿಲ್ಲು ಯುದ್ಧಕ್ಕೆ.

(ಎನ್ನುತ್ತಾ ಖಾಡಾಖಾಡಿಯಾಗಿ ಹೊಡೆದಾಡುವರು. ವಿಲಾಸಸಿಂಹನು ಭೂಮಿಗುರುಳುವನು. ಶೀಲಾವತಿಯು ರಣಮಲ್ಲನ ಕಾಲಿಗೆರಗುವಳು, ತೆರೆ ಬೀಳುವುದು.)

ಜನ ಗಣ ಮನ.

Edited, Printed & Published by K. V. Shenoy
at The Prabhat Printers Ltd., Mangalore.